15

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2017-18ನೇ** ಸಾಲಿನ ರಾಜ್ಯ ಆಯವ್ಯಯದ ಘೋಷಣೆಯನ್ವಯ **KSBDB**ಗೆ ನಿಗದಿಪಡಿಸಲಾದ **ರೂ.500.00ಲಕ್ಷ**ಗಳ ಅನುದಾನದ ಪೈಕಿ **ರೂ.113.00ಲಕ್ಷ**ಗಳನ್ನು MGIREDಯಲ್ಲಿ ಮಾದರಿ ಪಾರಂಪರಿಕ ಗ್ರಾಮವನ್ನು ಅಳವಡಿಸುವ ಯೋಜನೆಗೆ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 36 ಜೈಲಿಯೋ 2017, ದಿನಾಂಕ 27.07.2017.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 36 ಜೈಲಿಯೋ 2017, ದಿನಾಂಕ 22.05.2017.
3. ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆಇ/312/ವೆಚ್ಚ-6/2017, ದಿನಾಂಕ 15.05.2017.

ಪ್ರಸ್ತಾವನೆ :

**2017-18ನೇ** ಸಾಲಿನ ರಾಜ್ಯ ಆಯವ್ಯಯ ಘೋಷಣೆಯಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಗೆ ಸಂಬಂಧಿಸಿದಂತೆ ಬಯೋ ಡಿಸೇಲ್ ಕಾಂಪ್ಲೆಕ್ಸ್ ಮತ್ತು ಜೈವಿಕ ಇಂಧನ ಗುಣಮಟ್ಟದ ಪ್ರಯೋಗ ಶಾಲೆಯನ್ನು ನಿರ್ಮಿಸಲು **ರೂ.500.00ಲಕ್ಷಗಳನ್ನು** ಲೆಕ್ಕ ಶೀರ್ಷಿಕೆ **2501-04-105-0-03-059(ಯೋಜನೆ)**ಯಡಿ ಒದಗಿಸಿದ್ದು, ಈ ಪೈಕಿ **ರೂ.387.00ಲಕ್ಷಗಳನ್ನು** ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಗೆ ಜೈವಿಕ ಇಂಧನ ಗುಣಮಟ್ಟದ ಪ್ರಯೋಗ ಶಾಲೆ ಹಾಗೂ ಅಗತ್ಯ ಚಟುವಟಿಕೆಗಳಿಗಾಗಿ ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಬಿಡುಗಡೆ ಮಾಡಿದೆ.

ಇನ್ನುಳಿದ ಅನುದಾನ **ರೂ.113.00ಲಕ್ಷಗಳನ್ನು** ಮೇಲೆ ಓದಲಾದ (2)ರ ಆದೇಶದನ್ವಯ ಕಾರ್ಯನಿರ್ವಾಹಕ ನಿರ್ದೇಶಕರು, MGIRED, ಬೆಂಗಳೂರು ರವರಿಗೆ **MGIRED** ಯಲ್ಲಿ ಮಾದರಿ ಪಾರಂಪರಿಕ ಗ್ರಾಮವನ್ನು ಅಳವಡಿಸುವ ಯೋಜನೆಗೆ ಬಿಡುಗಡೆ ಮಾಡುವ ಕುರಿತು ವ್ಯವಸ್ಥಾಪಕ ನಿರ್ದೇಶಕರು, **KSBDB,** ಬೆಂಗಳೂರು ರವರಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ; ಗ್ರಾಅಪ/36(1)/ಜೈಲಿಯೋ/2017, ಬೆಂಗಳೂರು, ದಿನಾಂಕ 27.07.2017.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ಮೇಲೆ (1)ರಲ್ಲಿ ಓದಲಾದಂತೆ **2017-18ನೇ** ಸಾಲಿನಲ್ಲಿ ರಾಜ್ಯ ಆಯವ್ಯಯದಡಿ ಘೋಷಿಸಲಾದಂತೆ **ರೂ.500.00ಲಕ್ಷ**ಗಳ ಪೈಕಿ **ರೂ.387.00ಲಕ್ಷ**ಗಳನ್ನು ಜೈವಿಕ ಇಂಧನ ಗುಣಮಟ್ಟದ ಪ್ರಯೋಗ ಶಾಲೆ ಹಾಗೂ ಅಗತ್ಯ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಿದ್ದು, ಇನ್ನುಳಿದ **ರೂ.113.00ಲಕ್ಷ**(ಒಂದು ನೂರಾ ಹದಿಮೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು MGIREDಯಲ್ಲಿ ಮಾದರಿ ಪಾರಂಪರಿಕ ಗ್ರಾಮವನ್ನು ಅಳವಡಿಸುವ ಯೋಜನೆಗೆ ಕಾರ್ಯನಿರ್ವಾಹಕ ನಿರ್ದೇಶಕರು, **MGIRED,** ಬೆಂಗಳೂರು ರವರಿಗೆ ಬಿಡುಗಡೆ ಮಾಡುವ ಕುರಿತು ವ್ಯವಸ್ಥಾಪಕ ನಿರ್ದೇಶಕರು, **KSBDB,** ಬೆಂಗಳೂರುರವರಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಗ್ರಾಂಟ್–ಇನ್–ಏಡ್ ಬಿಲ್ಲುನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ–2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು ಖಜಾನೆಯಿಂದ ಅನುದಾನ ಪಡೆಯತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸಿ, ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ **ಸಂಖ್ಯೆ:ಆಇ/312/ವೆಚ್ಚ–6/2017, ಆರ್ಥಿಕ ಇಲಾಖೆ (ವೆಚ್ಚ–6) ದಿನಾಂಕ 15.05.2017**ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, KSBDB ಬೆಂಗಳೂರು.
3. ಕಾರ್ಯನಿರ್ವಾಪಕ ನಿರ್ದೇಶಕರು, MGiRED, ಬೆಂಗಳೂರು
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪಂ ರಾಜ್ ಇಲಾಖೆ.
2. ನಿರ್ದೇಶಕರು, ಪಿಎಂಐ, ಗ್ರಾಅಪಂ.ರಾಜ್ ಇಲಾಖೆ.
3. ಉಪ ನಿರ್ದೇಶಕರು (ತ್ರಾಂತಿಕ), ಗ್ರಾಮೂಸೌ ಕೋಶ, ಗ್ರಾಅಪ ಇಲಾಖೆ.
4. ಉಪ ನಿರ್ದೇಶಕರು, TNMC, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪಂ.ಇಲಾಖೆ.
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.